# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 662 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.07.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪಡಿತರ ಚೀಟಿಗಳ ಕುರಿತು ರಾಜ್ಯದಲ್ಲಿ ನೊಂದಣಿಯಾಗಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು; ಈಗ ಚಾಲ್ತಿಯಲ್ಲಿರುವ ಒಟ್ಟು ಪಡಿತರ ಚೀಟಿಗಳ ಸಂಖ್ಯೆ ಎಷ್ಟು; ರಾಜ್ಯದಲ್ಲಿ ಪ್ರಸ್ತುತ ಎಷ್ಟು ವಿಧದ ಪಡಿತರ ಚೀಟಿಗಳು ಇವೆ; (ವಿವರ ನೀಡುವುದು) | ರಾಜ್ಯದಲ್ಲಿ 2011 ರ ಜನಗಣತಿ ಪ್ರಕಾರ ಒಟ್ಟು 1,33,57,027 ಕುಟುಂಬಗಳಿದ್ದು. ಆದ್ಯತಾ, ಆದ್ಯತೇತರ ಪಡಿತರ ಚೀಟಿ ಮತ್ತು ಅಂತ್ಯೋದಯ ಅನ್ನ ಪಡಿತರ ಚೀಟಿಗಳು ಚಾಲ್ತಿಯಲ್ಲಿರುತ್ತದೆ. ವಿವರ ಈ ಕೆಳಕಂಡಂತಿರುತ್ತವೆ:- (see table below) |
| ಆ | ಕಳೆದ ಒಂದು ವರ್ಷದಿಂದ ಹಾಗೂ ಅದಕ್ಕಿಂತ ಹಳೆಯದಾದ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ ಪ್ರಕರಣಗಳು ಎಷ್ಟು; ಅವುಗಳಲ್ಲಿ ವಿಲೇವಾರಿಯಾದ ಪ್ರಕರಣಗಳ ಸಂಖ್ಯೆ ಎಷ್ಟು; ವಿಲೇವಾರಿ ಬಾಕಿಯಾಗಲು ಕಾರಣವೇನು; (ವಿವರ ನೀಡುವುದು) | 2017 ರಿಂದ ಸ್ವೀಕೃತವಾದ, ಅನುಮೋದಿಸಿದ ಹಾಗೂ ಬಾಕಿ ಇರುವ ಅರ್ಜಿಗಳ ವಿವರಗಳು ಈ ಕೆಳಕಂಡಂತಿರುತ್ತವೆ:- (see table below) |

| ಅಂತ್ಯೋದಯ ಅನ್ನ ಯೋಜನೆ | ಆದ್ಯತಾ ಪಡಿತರ ಚೀಟಿ | ಆದ್ಯತೇತರ ಪಡಿತರ ಚೀಟಿ | ಒಟ್ಟು |
|---|---|---|---|
| 10,84,009 | 1,16,52,660 | 25,00,790 | 1,52,37,459 |

| ಕ್ರ.ಸಂ | ವಿವರ | 2017 ರಿಂದ ಸ್ವೀಕೃತವಾದ ಅರ್ಜಿಗಳು | ಅನುಮೋದಿಸಿರುವ ಅರ್ಜಿಗಳು | ತಿರಸ್ಕೃತ ಅರ್ಜಿಗಳು | ಬಾಕಿ ಇರುವ ಅರ್ಜಿಗಳು |
|---|---|---|---|---|---|
| 1 | ಅಂತ್ಯೋದಯ ಅನ್ನ ಪಡಿತರ ಚೀಟಿ | -- | -- | -- | -- |
| 2 | ಆದ್ಯತಾ ಪಡಿತರ ಚೀಟಿ | 39,86,985 | 26,95,767 | 9,68,735 | 3,22,483 |
| 3 | ಆದ್ಯತೇತರ ಪಡಿತರ ಚೀಟಿ | 7,25,142 | 5,53,915 | 86,354 | 84,873 |

| | | |
|---|---|---|
| ಇ | ಪಡಿತರ ಚೀಟಿಗಾಗಿ ಹೊಸ ಅರ್ಜಿಗಳು, ತಿದ್ದುಪಡಿ ಮಾರ್ಪಾಡು, ಸೇರ್ಪಡೆ ಹಾಗೂ ಹೆಸರು ತೆಗೆದು ಹಾಕು ಇತ್ಯಾದಿ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯು ಸ್ಥಗಿತವಾಗಿರುವ ಕಾರಣ ರಾಜ್ಯದಲ್ಲಿ ಅನೇಕ ಅರ್ಹ ಕುಟುಂಬಗಳು ಪಡಿತರದಿಂದ ಹಾಗೂ ಪಡಿತರ ಚೀಟಿಯ ಆಧಾರದಲ್ಲಿ ನೀಡುವ ಹಲವು ಸೌಲಭ್ಯಗಳಾದ ವೈದ್ಯಕೀಯ ಚಿಕಿತ್ಸೆ, ವಿದ್ಯಾಭ್ಯಾಸ, ಉದ್ಯೋಗ ಹಾಗೂ ಮೀಸಲಾತಿ ಸೌಕರ್ಯ ಪಡೆಯುವಲ್ಲಿ ತೊಂದರೆಯಾಗಿದ್ದು, ಅವರಿಗೆ ಅಗತ್ಯವಿರುವ ಪಡಿತರ ಚೀಟಿಯನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಪಡಿತರ ಚೀಟಗಾಗಿ, ತಿದ್ದುಪಡಿ ಮಾರ್ಪಾಡು, ಸೇರ್ಪಡೆ ಹಾಗೂ ಹೆಸರು ತೆಗೆದು ಹಾಕು ಇತ್ಯಾದಿ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯು ನಿರಂತರವಾಗಿ ಮಾಡಲು ಅನುಮತಿಯನ್ನು ನೀಡಲಾಗಿರುತ್ತದೆ.<br>ಹೊಸ ಅರ್ಜಿಗಳ ವಿಲೇವಾರಿ ಕಾರ್ಯವನ್ನು ಹಂತ ಹಂತವಾಗಿ ಮಾಡಲಾಗುತ್ತಿದೆ.ಹಾಗೂ ತುರ್ತು ವೈದ್ಯಕೀಯ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಅರ್ಹ ಆದ್ಯತಾ ಪಡಿತರ ಚೀಟಿದಾರರಿಗೆ ನಿರಂತರವಾಗಿ ಆದ್ಯತಾ ಪಡಿತರ ಚೀಟಿ ನೀಡುವ ಕಾರ್ಯ ನಡೆಯುತ್ತಿದೆ. |
| ಈ | ರಾಜ್ಯದಲ್ಲಿ ಪಡಿತರ ಚೀಟಿ ನೀಡಲು ಇರುವ ಮಾನದಂಡಗಳು ಯಾವುವು; ಈ ಮಾನದಂಡಗಳನ್ನು ಆಧರಿಸಿ ಈಗಾಗಲೇ ನೀಡಿರುವ ಪಡಿತರ ಚೀಟಿಗಳಲ್ಲಿ ಅನರ್ಹ | ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಈ ಕೆಳಕಂಡ (ಅನರ್ಹತೆಯನ್ನಾಧರಿಸಿ ಹೊರಗಿಡುವ) ಮಾನದಂಡಗಳನ್ನು ಜಾರಿಯಲ್ಲಿರುತ್ತವೆ.<br>1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ನಿಗಮಗಳು/ಸ್ವಾಯತ್ತ ಸ್ಥಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು. |

<table>
<tr><td></td><td>ಪಡಿತರ ಚೀಟಿಗಳನ್ನು ಗುರುತಿಸಲಾಗಿದೆಯೇ; ಹಾಗೂ ಅವುಗಳನ್ನು ರದ್ದುಪಡಿಸಲು ಸರ್ಕಾರ ಏನು ಕ್ರಮವಹಿಸಿದೆ;</td><td rowspan="2">2. ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.<br><br>3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br><br>4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.<br><br>ಮೇಲಿನ ಮಾನದಂಡಗಳನ್ವಯ ರಾಜ್ಯದ ಎಲ್ಲಾ ಅರ್ಹ ಫಲಾನುಭವಿಗಳಿಗೆ ಆದ್ಯತಾ ಪಡಿತರ (PHH) ಚೀಟಿಗಳನ್ನು ಕೋರಿ ಸಲ್ಲಿಸಿರುವ ಅರ್ಜಿಗಳ ವಿಲೇವಾರಿಗೆ ಕ್ರಮ ವಹಿಸಲಾಗಿರುತ್ತದೆ.<br><br>ಮೇಲಿನ ಮಾನದಂಡಗಳಿಗೆ ವಿರುದ್ಧವಾಗಿ ಪಡಿತರ ಚೀಟಿ ಪಡೆದಿರುವ ವಿವರಗಳನ್ನು ಪರಿಶೀಲಿಸಿ ಅಂತ್ಯೋದಯ ಅನ್ನ ಮತ್ತು ಆದ್ಯತಾ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳಾಗಿ ಪರಿವರ್ತಿಸಿ ಹಾಗೂ ಅನರ್ಹರಿಂದ 2020-21ನೇ ಸಾಲಿನಿಂದ ಇಲ್ಲಿಯವರೆವಿಗೂ ಒಟ್ಟು 3,41,632 ಅನರ್ಹ ಆದ್ಯತಾ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾಗಿದ್ದು ಇವರಿಂದ ಒಟ್ಟು ರೂ. 13,75,20,710 ದಂಡ ವಸೂಲಿ ಮಾಡಲಾಗಿರುತ್ತದೆ.</td></tr>
<tr><td>ಉ</td><td>ರಾಜ್ಯದಲ್ಲಿ ನೀಡಿರುವ ಪಡಿತರ ಚೀಟಿಗಳು ರಾಜ್ಯದ ಒಟ್ಟು ಕುಟುಂಬಗಳ ಸಂಖ್ಯೆಗಿಂತ ಹೆಚ್ಚು ಅಥವಾ ಬಿಪಿಎಲ್ ಪಡಿತರ ಸಂಖ್ಯೆ ಅನುಪಾತವು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಹೆಚ್ಚು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಏನು ಕ್ರಮ ಜರುಗಿಸಲಾಗಿದೆ? (ವಿವರ ನೀಡುವುದು)</td></tr>
</table>

ಆನಾಸ 222 ಡಿಆರ್ಎ 2024 (ಇ-ಆಫೀಸ್)

(ಕೆ ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು